**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 963/2019

ಪಿಡಬ್ಲು :4 ಸಿಡಬ್ಲು :9

| | |
|---|---|
| ಸಾಕ್ಷಿಯ ಹೆಸರು | : ಶ್ರೀ. ಪ್ರವೀಣ ಲಕ್ಷ್ಮಣ ಆದಪ್ಪಗೋಳ |
| ತಂದೆಯ ಹೆಸರು | : ಶ್ರೀ. ಲಕ್ಷ್ಮಣ ಆದಪ್ಪಗೋಳ |
| ವಯಸ್ಸು | : 32 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸ್ತವ್ಯ | : ಮುಗಳಖೋಡ |
| ದಿನಾಂಕ | : 12-09-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 1 ನೇಮಿನಾಥ ಬಾಬನ್ನವರ ಚಾಸಾಃ7 ಪ್ರಾಸಾಃ 3 ಅರಿಹಂತ ಬಾಬನ್ನವರ, ಚಾಸಾಃ 8 ಪೊನ್ನಂಜಿ ಬಾಬನ್ನವರ, ಚಾಸಾಃ 6 ಶ್ರಿಕಾಂತ ಬಾಬನ್ನವರ, ಚಾಸಾಃ10 ಅಜಿತ ಬಾಬನ್ನವರ, ಚಾಸಾಃ 11 ಹಣಮಂತ ಬಾಬನ್ನವರ ಇವರು ನನಗೆ ಗೊತ್ತಿರುತ್ತಾರೆ. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ನನಗೆ ಪರಿಚಯ ಇರುತ್ತಾರೆ. ವಿಚಾರಣೆಗೆ ಗೈರು ಹಾಜರಾಗಿರುವ 13 ಜನ ಆರೋಪಿತರ ಗುರುತಿಸುವಿಕೆಯನ್ನು ಅಲ್ಲಗಳೆಯುವುದಿಲ್ಲ ಎಂದು, ಆರೋಪಿತರ ಗೈರು ಹಾಜರಿಯನ್ನು ಮನ್ನಿಸುವಂತೆ ಆರೋಪಿತರ ಪರ ವಕೀಲರು ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯನ್ನು ಪುರಸ್ಕರಿಸಲಾಗಿದೆ. ವಿಚಾರಣೆಗೆ ಗೈರು ಹಾಜರಾಗಿರುವ 13 ಜನ ಆರೋಪಿತರನ್ನು ಸಹ ನಾನು ಗುರುತಿಸುತ್ತೇನೆ.

2. ದಿನಾಂಕಃ 26-08-2017 ರಂದು ಮುಗಳಖೋಡ ಗ್ರಾಮದ ಆಸ್ತಿ ಸಂಖ್ಯೆ 643 ಜಾಗ ಬಾಬನ್ನವರ ಅವರಿಗೆ ಸೇರಿದ್ದು, ಅವರು ಕಟ್ಟಡ ಕಟ್ಟಲು ಪೂಜೆಯನ್ನು ಮಾಡಿ ಕಬ್ಬಿಣ

ಸರಳುಗಳನ್ನು ಹಾಕುತ್ತಿದ್ದು, ಪೂಜೆಗೆ ನನ್ನನ್ನೂ ಸಹ ಕರೆದಿದ್ದರು. ಆಗ ಸಮಯ ಬೆಳಗ್ಗೆ 11:00 ಗಂಟೆ ಆಗಿತ್ತು. ಬಾಬನ್ನವರ ಅವರು ಸ್ಥಳದಲ್ಲಿ ಕಟ್ಟಡ ಕಟ್ಟಲು ಪುರಸಭೆಯಿಂದ ಅನುಮತಿಯನ್ನು ಪಡೆದುಕೊಂಡು ಬಂದಿದ್ದರು. ಆ ಸಮಯದಲ್ಲಿ ಚಾಸಾಃ 1, ಚಾಸಾಃ 6, ಚಾಸಾಃ 7, ಚಾಸಾಃ8, ಚಾಸಾಃ 10, ಚಾಸಾಃ 11, ಚಾಸಾಃ 14 ಮತ್ತು ಚಾಸಾಃ 15 ಸಹ ಇದ್ದರು.

3. ಆ ಸಮಯದಲ್ಲಿ ಮಾದರ ಸಮಾಜದ ಬಸಪ್ಪ ಮತ್ತು ಇತರ ಆರೋಪಿಗಳು ಕಬ್ಬಿಣದ ಸರಳು, ಬಂಬು, ಕಟ್ಟಿಗೆ, ಕಲ್ಲು ಇವುಗಳನ್ನು ಹಿಡಿದುಕೊಂಡು ಬಂದು ಈ ಜಾಗ ನಮಗೆ ಸೇರಬೇಕೆಂದು ಹೇಳಿ ಅವಾಚ್ಯ ಶಬ್ದಗಳಿಂದ ಬೈದರು. ಪ್ರಕಾಶ ಎನ್ನುವವರು ಕಲ್ಲಿನ ರಾಶಿಯ ಮೇಲಿಂದ ಕೆಳಗೆ ಜಾರಿದನು, ಆಗ ಚಾಸಾಃ 8, ನಾನು, ಚಾಸಾಃ 1, ಚಾಸಾಃ 6 ನಾವುಗಳು ಹೋದೇವು, ಆ ಸಮಯದಲ್ಲಿ ಮಾದರ ಸಮಾಜದವರು ನಮಗೆ ಕಲ್ಲಿನಿಂದ, ಬಂಬುವಿನಿಂದ, ಕಟ್ಟಿಗೆಯಿಂದ ಹೊಡೆದರು.

4. 1 ನೇ ಆರೋಪಿ ಬಸಪ್ಪ ಬುರಡಿ ಎನ್ನುವವರು ಕಬ್ಬಿಣದ ಸರಳಿನಿಂದ ಚಾಸಾಃ 7 ಅರಿಹಂತ ಬಾಬನ್ನವರ ಇವರಿಗೆ ಹೊಡೆದರು. 4ನೇ ಆರೋಪಿ ಜಯಪ್ಪ ಬುರಡಿ ಎನ್ನುವವರು ಕಲ್ಲಿನಿಂದ ಚಾಸಾಃ 7 ಅರಿಹಂತ ಬಾಬನ್ನವರ ಇವರ ತಲೆಗೆ ಹೊಡೆದರು. 2ನೇ ಆರೋಪಿ ಭೀಮಪ್ಪ ಬುರಡಿ ಅವರು ಚಾಸಾಃ 4 ಶ್ರೀಕಾಂತ ಅವರಿಗೆ ಕಬ್ಬಿಣದ ಸರಳಿನಿಂದ ಎಡಕಾಲಿಗೆ ಹೊಡೆದರು. 3ನೇ ಆರೋಪಿ ವಿಠ್ಠಲ ಬುರಡಿ ಅವರು ಚಾಸಾಃ 6 ಶ್ರೀಕಾಂತ ಬಾಬನ್ನವರ ಇವರಿಗೆ ಕಲ್ಲಿನಿಂದ ಹೊಡೆದರು. 9ನೇ ಆರೋಪಿ ಚಿದಾನಂದ ಚಾಸಾಃ 8 ಪೊನ್ನಂಜಿ ಅವರಿಗೆ ಕಲ್ಲಿನಿಂದ ಎಡಕಣ್ಣಿನ ಮೇಲೆ ಹೊಡೆದರು. ಆ ಸಮಯದಲ್ಲಿ ನನಗೂ ಸಹ ಆರೋಪಿತರು ಕಲ್ಲಿನಿಂದ ಹೊಡೆದಿರುತ್ತಾರೆ. ಉಳಿದ ಆರೋಪಿತರು ಮಾದರ ಸಮಾಜದವರಾಗಿದ್ದು ಆ ದಿನ ಎಲ್ಲರೂ ಸ್ಥಳದಲ್ಲಿ ಇದ್ದರು.

5. ಸ್ಥಳದಲ್ಲಿ ಚಾಸಾಃ 14 ಮಿಲನ ದೇವನ್ನವರ ಹಾಗೂ ಚಾಸಾಃ 15 ಮಲ್ಲು ಕುರಾಡೆ ಅವರು ಇದ್ದು ಅವರಿಗೂ ಸಹ ಆರೋಪಿತರು ಕಲ್ಲಿನಿಂದ ತಲೆಗೆ, ಹೊಟ್ಟೆಗೆ, ಕಾಲುಗಳಿಗೆ ಹೊಡೆದಿರುತ್ತಾರೆ. ಅಜಿತ ಬಾಬನ್ನವರ, ರಾಮಚಂದ್ರ ಕುರಾಡೆ ಅವರು ಮತ್ತು ಇತರರು ಜಗಳ

ಬಿಡಿಸಿದರು. ಮಾದರ ಸಮಾಜದವರು ನಿಮ್ಮನ್ನು ಕೊಂದುಹಾಕುತ್ತೇವೆ ಎಂದು ಹೇಳಿ ಕಲ್ಲು, ಕಟ್ಟಿಗೆ, ಬಂಬು, ಕಬ್ಬಿಣದ ಸರಳನ್ನು ಅಲ್ಲಿಯೇ ಬಿಟ್ಟು ಹೊರಟುಹೋದರು.

6. ಗಾಯಾಳುಗಳೆಲ್ಲ ನಾರಗೊಂಡ ಆಸ್ಪತ್ರೆಗೆ ಹೋಗಿ ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದರು. ನಾನೂ ಸಹ ನಾರಗೊಂಡ ಆಸ್ಪತ್ರೆಗೆ ಹೋಗಿ ತೋರಿಸಿಕೊಂಡು ಬಂದಿದ್ದೇನೆ. ನನಗೆ ಹೆಚ್ಚಾಗಿ ಪೆಟ್ಟು ಆಗಿರುವುದಿಲ್ಲ.

7. ನಂತರ ಚಾಸಾಃ 1 ನೇಮಿನಾಥ ಬಾಬನ್ನವರ ಅವರು ದೂರು ಕೊಟ್ಟಿದ್ದಾರೆ ಎಂದು ತಿಳಿಯಿತು. ಆರೋಪಿತರು ಕೃತ್ಯಕ್ಕೆ ಬಳಸಿದ ಬಂಬು, ಕಟ್ಟಿಗೆ, ಕಬ್ಬಿಣದ ಸರಳು ಮತ್ತು ಕಲ್ಲುಗಳು ಇವುಗಳನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದಲ್ಲಿ ಹಾಜರುಮಾಡಿರುವ ಮು.ಮಾ.1 ರಿಂದ ಮು.ಮಾ.8 ವಸ್ತುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆಯನ್ನು ನೀಡಿದ್ದೇನೆ.

**ಪಾಟೀ ಸವಾಲು: 1 ರಿಂದ 4, 8, 9, 13 ಮತ್ತು 17 ನೇ ಆರೋಪಿತರ ಪರ ಶ್ರೀ.ಹೆಚ್.ಸಿ.ಎಸ್ ವಕೀಲರಿಂದ**

ನಾನು M.P.Ed ಪದವಿಧರ. ಚಾಸಾಃ 1, ಚಾಸಾಃ 6 ರಿಂದ ಚಾಸಾಃ 8, ಚಾಸಾಃ 10 ಮತ್ತು ಚಾಸಾಃ 11 ರವರು ನನ್ನ ಸಂಬಂಧಿಕರು. ಬಸಪ್ಪ ಮಾದರ ಅವರು ನೀಡಿರುವ ದೂರಿನಲ್ಲಿ ನಾನು ಸಹ ಒಬ್ಬ ಆರೋಪಿ ಎನ್ನುವುದು ಸರಿ. ಆ ಪ್ರಕರಣ ಸಹ ಇದೇ ನ್ಯಾಯಾಲಯದಲ್ಲಿ ನಡೆಯುತ್ತಿದ್ದು, ನಾನೂ ಸಹ ಹಾಜರಾಗುತ್ತಿದ್ದೇನೆ ಎನ್ನುವುದು ಸರಿ.

2. ವಿವಾದಿತ ನಿವೇಶನ ಸಂಖ್ಯೆ 643 ಬಾಬನ್ನವರ ಅವರ ಕುಟುಂಬಕ್ಕೆ ಸೇರಿದ್ದು ಮತ್ತು ಅವರು ಆ ಸ್ಥಳದಲ್ಲಿ ಕಟ್ಟಡ ಕಟ್ಟಲು ಅನುಮತಿ ಪಡೆದುಕೊಂಡಿದ್ದ ಬಗ್ಗೆ ನಾನು ಖುದ್ದಾಗಿ ದಾಖಲೆಯನ್ನು ಪರಿಶೀಲಿಸಿರುವುದಿಲ್ಲ. ಚಾಸಾಃ 13 ರವರು ಈ ಹಿಂದೆ ಮುಗಳಖೋಡ ಗ್ರಾಮ ಪಂಚಾಯತಿಯ ಚೇರಮನ ಆಗಿದ್ದರು ಎನ್ನುವುದು ನನಗೆ ಗೊತ್ತಿಲ್ಲ. 2015 ರಲ್ಲಿ

ಮುಗಳಖೋಡ ಗ್ರಾಮ ಪಂಚಾಯತಿಯಿಂದ ಪುರಸಭೆ ಆಯಿತು ಎನ್ನುವುದಕ್ಕೆ ಸಾಕ್ಷಿ ನನಗೆ ವರ್ಷ ಗೊತ್ತಿಲ್ಲ, ಆದರೆ ಪುರಸಭೆ ಆಗಿದೆ ಎಂದು ಹೇಳಿದ್ದಾರೆ.

3. ಚಾಸಾಃ 13 ರವರ ಸಂಬಂಧಿಕರಾದ ಮಹಾವೀರ ಕುರಾಡೆ ಎನ್ನುವವರು ಹಾಲಿ ಮುಗಳಖೋಡ ಪುರಸಭೆಯ ಸದಸ್ಯರು ಎನ್ನುವುದು ಸರಿ. ಸರ್ಕಾರದವರು ಮಾದರ ಸಮಾಜಕ್ಕೆ ನೀಡಿದ ನಿವೇಶನವನ್ನು ಪಡೆದುಕೊಳ್ಳುವ ದುರುದ್ದೇಶದಿಂದ ಚಾಸಾಃ 13 ರಾಮಚಂದ್ರ ಕುರಾಡೆ ಅವರು ಪಂಚಾಯತಿ ಅಧ್ಯಕ್ಷರಾಗಿದ್ದಾಗ ಅವರ ಸಹಾಯ ಪಡೆದುಕೊಂಡು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎನ್ನುವುದು ಸರಿಯಲ್ಲ.

4. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತಹ ಯಾವುದೇ ಘಟನೆ ನಡೆದಿಲ್ಲ, ಯಾರಿಗೂ ಗಾಯಗಳು ಆಗಿಲ್ಲ, ಆರೋಪಿತರು ಎಂದಿಗೂ ಚಾಸಾಃ 1, ಚಾಸಾಃ 4, ಚಾಸಾಃ6 ಮತ್ತು ಚಾಸಾಃ 7 ಇವರುಗಳ ಮೇಲೆ ಹಲ್ಲೆ ಮಾಡಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

5. ವಿವಾದಿತ ಸ್ಥಳವನ್ನು ಪಡೆದುಕೊಳ್ಳುವ ಉದ್ದೇಶದಿಂದ ನಮ್ಮ ಸಮಾಜದವರು ಮಾದರ ಸಮಾಜದವರ ಮೇಲೆ ಗಲಾಟೆ ಮಾಡಿ, ಜಾತಿ ನಿಂದನೆ ಮಾಡಿ, ಅವರುಗಳ ಮೇಲೆ ಹಲ್ಲೆ ಸಹ ಮಾಡಿದ್ದು, ಅದರಿಂದ ತಪ್ಪಿಸಿಕೊಳ್ಳಲು ಅವರ ವಿರುದ್ಧ ಈ ಪ್ರಕರಣವನ್ನು ನೀಡಲಾಗಿದೆ ಎನ್ನುವುದು ಸರಿಯಲ್ಲ. ನಾನು ಚಾಸಾಃ 1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು:5 ರಿಂದ 7, 10 ರಿಂದ 12, 14 ರಿಂದ 16 ನೇ ಆರೋಪಿತರ ಪರ ಶ್ರೀ.ಆರ್.ಕೆ.ಬಿ ವಕೀಲರಿಂದ**

1 ರಿಂದ 4, 8, 9, 13 ಮತ್ತು 17 ನೇ ಆರೋಪಿತರ ಪರ ಶ್ರೀ.ಹೆಚ್.ಸಿ.ಎಸ್ ವಕೀಲರು ಮಾಡಿದ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿದ್ದಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.